# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 1034 |
| ಉತ್ತರಿಸಬೇಕಾದ ದಿನಾಂಕ | : | 24.02.2023. |
| ಸದಸ್ಯರ ಹೆಸರು | : | ಶ್ರೀ ಅರವಿಂದ ಕುಮಾರ್ ಅರಳಿ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಮಾನ್ಯ ರೇಷ್ಮೆ, ಯುವ ಸಬಲೀಕರಣ<br>ಮತ್ತು ಕ್ರೀಡಾ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೀದರ್ ಜಿಲ್ಲೆಯಲ್ಲಿ ಏಕೈಕ ಸ್ಪೋರ್ಟ್ಸ್ ಹಾಸ್ಟೆಲ್ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಅದರ ಪ್ರಸ್ತುತ ಸ್ಥಿತಿಗತಿಗಳೇನು | ಹೌದು.<br><br>ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಬೀದರ್ ಜಿಲ್ಲೆಯಲ್ಲಿ ಕ್ರೀಡಾ ವಸತಿ ನಿಲಯವನ್ನು ಸ್ಥಾಪಿಸಲಾಗಿದೆ. ಅಲ್ಲಿ ನುರಿತ ತರಬೇತುದಾರರಿಂದ ವೈಜ್ಞಾನಿಕ ತರಬೇತಿ ನೀಡಲಾಗುತ್ತಿದೆ. ಪ್ರಸ್ತುತ ಬೀದರ್ ಕ್ರೀಡಾ ವಸತಿ ನಿಲಯದಲ್ಲಿರುವ ಕ್ರೀಡಾಪಟುಗಳಿಗೆ ಒಳಾಂಗಣ ಕ್ರೀಡಾಂಗಣದಲ್ಲಿ ವಸತಿ ಸೌಕರ್ಯ ಕಲ್ಪಿಸಲಾಗಿದೆ.<br><br>ಬೀದರ್ ಜಿಲ್ಲೆಯಲ್ಲಿ ಹೊಸ ಕ್ರೀಡಾ ವಸತಿ ನಿಲಯವನ್ನು ನಿರ್ಮಿಸುವ ಕಾಮಗಾರಿಗೆ ಸಂಬಂಧಿಸಿದಂತೆ, ಸರ್ಕಾರದ ಆದೇಶ ಸಂಖ್ಯೆ: ವೈಎಸ್‌ಡಿ-ಇಪಿಇ/30/2023; ದಿನಾಂಕ: 20.02.2023 ರ ಆದೇಶದಲ್ಲಿ ರೂ.371.84 ಲಕ್ಷಗಳಿಗೆ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. (ಪ್ರತಿಯನ್ನು ಅನುಬಂಧ-1 ರಲ್ಲಿ ನೀಡಲಾಗಿದೆ) |
| ಆ | ಈ ಹಾಸ್ಟೆಲ್ ನಲ್ಲಿ ಎಷ್ಟು ಮಕ್ಕಳು ಪ್ರವೇಶ ಪಡೆದಿದ್ದಾರೆ; ಪ್ರವೇಶ ಪಡೆಯುವ ಗುರಿ(Intake) ಎಷ್ಟು; ಅವರಿಗೆ ಸರಿಯಾದ ಆಹಾರ ನೀಡಲಾಗುತ್ತಿದೆಯೇ; ನೀಡುತ್ತಿದ್ದಲ್ಲಿ ದಿನದ ಮೆನ್ಯೂ ಏನಿದೆ ( ವಿವರ ನೀಡುವುದು) | ಬೀದರ್ ಕ್ರೀಡಾ ವಸತಿ ನಿಲಯದಲ್ಲಿ 41 ಕ್ರೀಡಾಪಟುಗಳು ಪ್ರವೇಶ ಪಡೆದಿರುತ್ತಾರೆ.<br><br>ಸರ್ಕಾರದ ಆದೇಶದ ಸಂಖ್ಯೆ: ಯುಸೇಇ 265 ಯುಸೇಕ್ರೀ 2016, ದಿನಾಂಕ:18-01-2017ರ ಅನ್ವಯ ಬೀದರ್ ಕ್ರೀಡಾವಸತಿ ನಿಲಯದಲ್ಲಿ 100 ಕ್ರೀಡಾಪಟುಗಳಿಗೆ ಪ್ರವೇಶ ನೀಡಲು ಸರ್ಕಾರದ ಅನುಮೋದನೆ ನೀಡಲಾಗಿದೆ. (ಪ್ರತಿಯನ್ನು ಅನುಬಂಧ-2 ರಲ್ಲಿ ನೀಡಲಾಗಿದೆ) |

| | | |
|---|---|---|
| | | ಬೀದರ್ ಕ್ರೀಡಾ ವಸತಿ ನಿಲಯದ ಕ್ರೀಡಾಪಟುಗಳಿಗೆ ಇಲಾಖೆ ನಿಗದಿಪಡಿಸಿರುವ ಮೆನ್ಯೂಪಟ್ಟಿ ಪ್ರಕಾರ ಪೌಷ್ಟಿಕ ಆಹಾರ ನೀಡಲಾಗುತ್ತಿದೆ.<br><br>5ನೇ ತರಗತಿಯಿಂದ 10ನೇ ತರಗತಿಯವರೆಗಿನ ಕ್ರೀಡಾಪಟುಗಳಿಗೆ ಸರ್ಕಾರದಿಂದ ಅನುಮೋದನೆಯಾಗಿರುವ ಮೆನ್ಯೂಪಟ್ಟಿಯನ್ನು ಅನುಬಂಧ-03 ರಲ್ಲಿ ನೀಡಲಾಗಿದೆ. |
| ಇ | ಇಲ್ಲಿಯ ಮಕ್ಕಳಿಗೆ ಪೌಷ್ಟಿಕ ಆಹಾರ ನೀಡದಿರಲು ಕಾರಣವೇನು<br><br>(ಮಾಹಿತಿ ನೀಡುವುದು) | ಮೇಲಿನ ಉತ್ತರದ ಹಿನ್ನೆಲೆಯಲ್ಲಿ ಪ್ರಶ್ನೆ ಉದ್ಭವಿಸುವುದಿಲ್ಲ. |
| ಈ | ಆಹಾರ ಟೆಂಡರ್ ಪ್ರಕ್ರಿಯೆ ಪೂರ್ತಿಗೊಳಿಸದಿರುವುದಕ್ಕೆ ಕಾರಣವೇನು: ಕಳೆದ ಒಂದು ವರ್ಷದಿಂದ ಮಕ್ಕಳು ಪೌಷ್ಟಿಕ ಆಹಾರವಿಲ್ಲದೆ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೀದರ್ ಕ್ರೀಡಾ ವಸತಿ ನಿಲಯದ ಕ್ರೀಡಾಪಟುಗಳಿಗೆ ಇಲಾಖೆ ನಿಗದಿಪಡಿಸಿರುವ ಆಹಾರ ಪಟ್ಟಿಯನ್ವಯ ಊಟೋಪಹಾರ ಸರಬರಾಜು ಮಾಡಲು ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಟೆಂಡರ್ ನಲ್ಲಿ ಕಡಿಮೆ ದರ ನಮೂದಿಸಿರುವ ಬಿಡ್ ದಾರರಿಗೆ ಕಾರ್ಯಾದೇಶವನ್ನು ದಿನಾಂಕ:14.02.2023 ರಂದು ನೀಡಲಾಗಿದೆ.<br><br>ಕಳೆದ ಒಂದು ವರ್ಷದಿಂದಲೂ ನಿಗದಿತ ಮೆನು ಪ್ರಕಾರ ಸ್ವಳೀಯವಾಗಿ ದರಪಟ್ಟಿ ಆಹ್ವಾನಿಸಿ ಪೌಷ್ಟಿಕ ಆಹಾರವನ್ನೇ ನೀಡಲಾಗಿರುತ್ತದೆ. ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆಯಾಗಿರುವುದಿಲ್ಲ. |
| ಉ | ಹಾಗಿದ್ದಲ್ಲಿ, ಸದರಿ ಟೆಂಡರ್ ಪ್ರಕ್ರಿಯೆ ಮುಗಿಸಿ ಆದಷ್ಟು ಬೇಗ ಮಕ್ಕಳಿಗೆ ಪೌಷ್ಟಿಕ ಆಹಾರ ಒದಗಿಸಲಾಗುವುದೇ; ಮಕ್ಕಳು ಇಂತಹ ಅಪೌಷ್ಟಿಕತೆ ಆಹಾರ ಸೇವಿಸಲು ಕಾರಣರಾದ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು? (ವಿವರ ನೀಡುವುದು) | ಪ್ರಸ್ತುತ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿದ್ದು, ದಿನಾಂಕ: 14.02.2023ರಂದು ಕಾರ್ಯಾದೇಶ ನೀಡಲಾಗಿದೆ. ಇಲಾಖೆ ನಿಗದಿಪಡಿಸಿದ ಮೆನು ಪ್ರಕಾರವೇ ಪೌಷ್ಟಿಕ ಆಹಾರ ನೀಡಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ. |

**ವೈಎಸ್‌ಡಿ-ಇಬಿಬಿ/31/2023**

**(ಡಾ|| ಕೆ.ಸಿ. ನಾರಾಯಣಗೌಡ)**
ರೇಷ್ಮೆ, ಯುವ ಸಬಲೀಕರಣ ಮತ್ತು
ಕ್ರೀಡಾ ಸಚಿವರು.

ಅನುಬಂಧ - 1

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಬೀದರ್‌ನಲ್ಲಿ ಹೊಸ ಕ್ರೀಡಾ ವಸತಿ ನಿಲಯವನ್ನು ನಿರ್ಮಿಸುವ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು ಹಾಗೂ ಅನುದಾನ ಹಂಚಿಕೆ ಮಾಡುವ ಬಗ್ಗೆ- ಆದೇಶ.

**ಓದಲಾಗಿದೆ:** ಪತ್ರ ಸಂಖ್ಯೆ: ಡಿವೈಇಎಸ್/ಕ್ರಿಯೋ/ತಾಂ.ಶಾ/296/2022-23, ದಿನಾಂಕ: 02.02.2023.

********

**ಪ್ರಸ್ತಾವನೆ:**

ಮೇಲೆ ಓದಲಾದ ಪತ್ರದಲ್ಲಿ, ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರು " ಬೀದರ್ ಜಿಲ್ಲೆಯಲ್ಲಿ ಕ್ರೀಡಾಪಟುಗಳಿಗೆ ಕ್ರೀಡಾಭ್ಯಾಸಕ್ಕಾಗಿ ಕ್ರೀಡಾ ವಸತಿ ನಿಲಯದ ಕೊರತೆ ಇರುವುದರಿಂದ ಹಾಗೂ ಮಾನ್ಯ ವಿಧಾನ ಪರಿಷತ್ತಿನಲ್ಲಿ ಚರ್ಚೆಯ ಸಂದರ್ಭದಲ್ಲಿ ಈ ಕುರಿತು ಗಂಭೀರವಾಗಿ ಪ್ರಸ್ತಾಪಿರುವುದನ್ನು ತಿಳಿಸುತ್ತಾ, ಬೀದರ್‌ನಲ್ಲಿ ಹೊಸ ಕ್ರೀಡಾ ವಸತಿ ನಿಲಯವನ್ನು ತುರ್ತಾಗಿ ಅನುಷ್ಠಾನಗೊಳಿಸಬೇಕಾಗಿದೆ. ಬೀದರ್ ಜಿಲ್ಲೆಯಲ್ಲಿ 100 ಕ್ರೀಡಾಪಟುಗಳಿಗೆ (50 ಬಾಲಕರು + 50 ಬಾಲಕಿಯರು) ವಸತಿ ಸೌಕರ್ಯ ಕಲ್ಪಿಸುವ ಸಂಬಂಧ ಚಾಲ್ತಿಯಲ್ಲಿರುವ ಲೋಕೋಪಯೋಗಿ ಇಲಾಖೆಯ ದರಗಳನ್ವಯ ರೂ.371.84 ಲಕ್ಷಗಳ ಅಂದಾಜು ಪಟ್ಟಿಯನ್ನು ತಯಾರಿಸಿದ್ದು, ಈ ಉದ್ದೇಶಕ್ಕಾಗಿ ಪ್ರಸಕ್ತ ಸಾಲಿನಲ್ಲಿ ಲೆಕ್ಕಶೀರ್ಷಿಕೆ: 4202-03-102-0-03-386 ಬಂಡವಾಳ ವೆಚ್ಚ ಯೋಜನೆಯಡಿ ಉಳಿಕೆಯಾಗುವ ಅನುದಾನದಲ್ಲಿ ಶೇ.30 ರಷ್ಟು ಅಂದರೆ ರೂ.94.54 ಲಕ್ಷಗಳ (ಶೇ.18 ಜಿ.ಎಸ್.ಟಿ. ಹೊರತುಪಡಿಸಿ) ವೆಚ್ಚವನ್ನು ಭರಿಸಲು ಅನುಮೋದನೆ ನೀಡುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ವೈಎಸ್‌ಡಿ-ಇಪಿಇ/30/2023;**
**ಬೆಂಗಳೂರು, ದಿನಾಂಕ: 20.02.2023.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಬೀದರ್‌ನಲ್ಲಿ ಹೊಸ ಕ್ರೀಡಾ ವಸತಿ ನಿಲಯವನ್ನು ನಿರ್ಮಿಸುವ ಕಾಮಗಾರಿಯನ್ನು ರೂ.371.84 ಲಕ್ಷಗಳ ವೆಚ್ಚದಲ್ಲಿ ಕೈಗೊಳ್ಳಲು ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರು ಸಲ್ಲಿಸಿರುವ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಹಾಗೂ ಸದರಿ ಕಾಮಗಾರಿಯ ವೆಚ್ಚವನ್ನು 2022-23ನೇ ಸಾಲಿನ ಲೆಕ್ಕಶೀರ್ಷಿಕೆ: 4202-03-102-0-03-386 ಬಂಡವಾಳ ವೆಚ್ಚ ಯೋಜನೆ ಅಡಿಯಲ್ಲಿ ಉಳಿಕೆಯಾಗುವ ಅನುದಾನದಡಿದಿಂದ ಶೇ.30ರಷ್ಟು ಅಂದರೆ

ರೂ.94.54 ಲಕ್ಷಗಳ (ಶೇ.18ರಷ್ಟು ಜಿ.ಎಸ್.ಟಿ. ಹೊರತುಪಡಿಸಿ) ವೆಚ್ಚವನ್ನು ಭರಿಸಲು ಸರ್ಕಾರದ ಅನುಮೋದನೆ ನೀಡಿ ಆದೇಶಿಸಲಾಗಿದೆ.

ಈ ಸಂಬಂಧ ಕೂಡಲೇ ಟೆಂಡರ್ ಆಹ್ವಾನಿಸಿ ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಜಯಶ್ರೀ .ಎಸ್.ಎನ್.)**
ಸರ್ಕಾರದ ಉಪ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಎ ಮತ್ತು ಇ) / (ಜಿ&ಎಸ್.ಎಸ್.ಎ.) / (ಇ& ಆರ್.ಎಸ್.ಎ.), ಕರ್ನಾಟಕ, ಪಿ.ಬಿ. ನಂ.5398, ಬೆಂಗಳೂರು.
2. ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು.
3. ಸರ್ಕಾರದ ಜಂಟಿ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಆ.ಆ. ಕೋಶ), ಬಹುಮಹಡಿ ಕಟ್ಟಡ, ಬೆಂಗಳೂರು.
4. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
5. ಉಪ ನಿರ್ದೇಶಕರು, ಟಿ.ಎನ್.ಎಂ.ಸಿ., ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
6. ಮಾನ್ಯ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬಹುಮಹಡಿ ಕಟ್ಟಡ.
8. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಅನುಬಂಧ - 2

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ** : ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ 11 ಕ್ರೀಡಾ ಶಾಲೆಗಳನ್ನು ಮೇಲ್ದರ್ಜೆಗೆ ಏರಿಸುವ ಬಗ್ಗೆ.

**ಓದಲಾಗಿದೆ** : 1. ಸರ್ಕಾರಿ ಆದೇಶ ಸಂಖ್ಯೆ: ವಾಪ್ರಯು 75 ಯುಸೇಕ್ರೀ 2006, ದಿನಾಂಕ: 12.01.2007.

2. ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಪತ್ರ ಸಂಖ್ಯೆ: ಡಿವೈಇಎಸ್/ಎಸ್ಎಸ್ಹೆಚ್/116/2016-17, ದಿನಾಂಕ:23.07.2016

******

**ಪ್ರಸ್ತಾವನೆ**

ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ, ರಾಜ್ಯದಲ್ಲಿ ಕ್ರೀಡಾಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ಎಳೆಯ ವಯಸ್ಸಿನಲ್ಲಿ ಕ್ರೀಡಾ ಪ್ರತಿಭೆಗಳನ್ನು ಗುರುತಿಸಿ, ನುರಿತ ತರಬೇತುದಾರರಿಂದ ವೈಜ್ಞಾನಿಕ ತರಬೇತಿಯನ್ನು ನೀಡಿ ರಾಷ್ಟ್ರ ಮತ್ತು ಅಂತರರಾಷ್ಟ್ರ ಮಟ್ಟದ ಕ್ರೀಡಾಪಟುಗಳನ್ನು ಮಾಡುವ ಉದ್ದೇಶದಿಂದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ಕ್ರೀಡಾ ಶಾಲೆಗಳನ್ನು ಪ್ರಾರಂಭಿಸಲಾಗಿರುತ್ತದೆ.

ಕ್ರೀಡಾಶಾಲೆಗಳು ಪ್ರಾರಂಭವಾದಾಗಿನಿಂದ ಕ್ರೀಡಾ ಶಾಲೆಯ ಕ್ರೀಡಾಪಟುಗಳು ರಾಜ್ಯಮಟ್ಟದಲ್ಲಿ ಪದಕ ಪಡೆಯುತ್ತಿದ್ದು, 7ನೇ ತರಗತಿ ಮುಗಿದ ನಂತರ 8ನೇ ತರಗತಿಗೆ ಪ್ರವೇಶ ಪಡೆಯಲು ಹಾಗೂ ಕ್ರೀಡೆಯಲ್ಲಿ ಮುಂದುವರೆಯಲು ಅವಕಾಶ ಕಡಿಮೆ ಇರುವುದರಿಂದ ಮತ್ತು ಕೆಲವು ಪೋಷಕರು ತಮ್ಮ ಮಕ್ಕಳನ್ನು ಜಿಲ್ಲೆಯಿಂದ ಹೊರಗೆ ಕಳುಹಿಸಲು ಇಚ್ಚಿಸದ ಕಾರಣ ಉನ್ನತ ಮಟ್ಟದ ಕ್ರೀಡಾ ಸಾಧನೆ ಮಾಡಲು ಅವಕಾಶವಿಲ್ಲದಂತಾಗಿರುತ್ತದೆ. ಈವರೆವಿಗೂ ಇಲಾಖೆ ನಡೆಸುತ್ತಿರುವ ಕ್ರೀಡಾ ಶಾಲೆಗಳು ಹಾಗೂ ಕ್ರೀಡಾ ನಿಲಯಗಳ ಪೈಕಿ 10 ಕೀಡಾ ಶಾಲೆಗಳನ್ನು 5 ರಿಂದ 10ನೇ ತರಗತಿಯವರೆಗೆ ಮೇಲ್ದರ್ಜೆಗೆ ಏರಿಸಲಾಗಿದೆ. ಈ ಹಿನ್ನೆಲೆಯಲ್ಲಿ 2017-18ನೇ ಸಾಲಿನಿಂದ ಬೀದರ್, ಚಿತ್ರದುರ್ಗ, ಚಿಕ್ಕಮಗಳೂರು, ಚಾಮರಾಜನಗರ, ದಾವಣಗೆರೆ, ಧಾರವಾಡ, ಗದಗ, ಹಾವೇರಿ, ಕೊಪ್ಪಳ, ಶಿವಮೊಗ್ಗ ಮತ್ತು ತುಮಕೂರು ಜಿಲ್ಲೆಗಳ ಕ್ರೀಡಾಶಾಲೆಗಳಲ್ಲಿ ಪ್ರಸ್ತುತ ಇರುವ 5 ರಿಂದ 7ನೇ ತರಗತಿಯವರೆಗಿನ ಪ್ರವೇಶಾವಕಾಶವನ್ನು, 10ನೇ ತರಗತಿಯವರೆಗೆ ಮೇಲ್ದರ್ಜೆಗೆ ಏರಿಸಲು ಮತ್ತು ಪ್ರತಿ ಕ್ರೀಡಾಶಾಲೆಗೆ ಹಾಲಿ ಇರುವ 50 ಕ್ರೀಡಾಪಟುಗಳ ಸಂಖ್ಯೆಯನ್ನು 100ಕ್ಕೆ ಏರಿಸಲು ಹಾಗೂ 2017-18ನೇ ಸಾಲಿನಿಂದ ಪ್ರತಿವರ್ಷ ಪ್ರತಿ ಕ್ರೀಡಾಶಾಲೆಗೆ 10 ಜನ ಕ್ರೀಡಾಪಟುಗಳಂತೆ ಒಟ್ಟು 11 ಕ್ರೀಡಾಶಾಲೆಗಳಿಗೆ 110 ಜನ ಕ್ರೀಡಾಪಟುಗಳನ್ನು ಆಯ್ಕೆಮಾಡಿಕೊಂಡು, ಸದರಿ ವೆಚ್ಚವನ್ನು ವಾರ್ಷಿಕ ಅನುದಾನದಲ್ಲಿ ಲೆಕ್ಕಶೀರ್ಷಿಕೆ: 2204-00-104-0-25/051 ಭರಿಸಲು ಅನುಮೋದನೆ ನೀಡುವಂತೆ ಮೇಲೆ ಓದಲಾದ (2)ರ ಪತ್ರದಲ್ಲಿ, ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರು ಸರ್ಕಾರವನ್ನು ಕೋರಿರುತ್ತಾರೆ.

ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಯುಸೇಇ 265 ಯುಸೇಕ್ರೀ 2016,**

**ಬೆಂಗಳೂರು, ದಿನಾಂಕ: 18.01.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನಲೆಯಲ್ಲಿ, 2017-18ನೇ ಸಾಲಿನಿಂದ ಬೀದರ್, ಚಿತ್ರದುರ್ಗ, ಚಿಕ್ಕಮಗಳೂರು, ಚಾಮರಾಜನಗರ, ದಾವಣಗೆರೆ, ಧಾರವಾಡ, ಗದಗ, ಹಾವೇರಿ, ಕೊಪ್ಪಳ, ಶಿವಮೊಗ್ಗ ಮತ್ತು ತುಮಕೂರು ಜಿಲ್ಲೆಗಳ ಕ್ರೀಡಾಶಾಲೆಗಳ ಪ್ರವೇಶಾವಕಾವನ್ನು ಹೆಚ್ಚಿಸಿ

--2

5ನೇ ತರಗತಿಯಿಂದ 10 ನೇ ತರಗತಿಯವರೆಗೆ ಮೇಲ್ದರ್ಜೆಗೇರಿಸಲು ಹಾಗೂ ಹಾಲಿ ಇರುವ 50 ಕ್ರೀಡಾಪಟುಗಳ ಸಂಖ್ಯೆಯನ್ನು 100ಕ್ಕೆ ಏರಿಸಲು ಮತ್ತು ಇಲಾಖಾ ಮಾರ್ಗಸೂಚಿಯ ಪ್ರಕಾರ ಮುಂದಿನ ಐದು ವರ್ಷಗಳಲ್ಲಿ ಪ್ರತಿ ವರ್ಷ ಪ್ರತಿ ಕ್ರೀಡಾಶಾಲೆಗೆ 10 ಕ್ರೀಡಾಪಟುಗಳಂತೆ ಒಟ್ಟು 11 ಕ್ರೀಡಾಶಾಲೆಗಳಿಗೆ 110 ಕ್ರೀಡಾಪಟುಗಳನ್ನು ಆಯ್ಕೆ ಮಾಡಿ ಈ ಕೆಳಕಂಡಂತೆ ಪ್ರವೇಶ ನೀಡಲು ಸರ್ಕಾರದ ಅನುಮೋದನೆ ನೀಡಿ ಆದೇಶಿಸಿದೆ:

| ಕ್ರ ಸಂ | ಜಿಲ್ಲೆ | ಕ್ರೀಡೆ | ಹಾಲಿ ಇರುವ ಕ್ರೀಡಾಪಟುಗಳ ಸಂಖ್ಯೆ | 2017-18ರಲ್ಲಿ ಪ್ರವೇಶ | 2018-19 | 2019-20 | 2020-2021 | 2021-2022 |
|---|---|---|---|---|---|---|---|---|
| 1 | ಬೀದರ್ ಕ್ರೀಡಾ ಶಾಲೆ | ಅಥ್ಲೆಟಿಕ್ಸ್, ವಾಲಿಬಾಲ್, ಬ್ಯಾಸ್ಕೆಟ್ ಬಾಲ್, | 50 | 10 | 10 | 10 | 10 | 10 |
| 2 | ಚಿತ್ರದುರ್ಗ ಕ್ರೀಡಾ ಶಾಲೆ | ಅಥ್ಲೆಟಿಕ್ಸ್, ವಾಲಿಬಾಲ್, ಈಜು | 50 | 10 | 10 | 10 | 10 | 10 |
| 3 | ಚಿಕ್ಕಮಂಗಳೂರು ಕ್ರೀಡಾ ಶಾಲೆ | ಅಥ್ಲೆಟಿಕ್ಸ್, ವಾಲಿಬಾಲ್, ಜುಡೋ | 50 | 10 | 10 | 10 | 10 | 10 |
| 4 | ಚಾಮರಾಜನಗರ ಕ್ರೀಡಾ ಶಾಲೆ | ವಾಲಿಬಾಲ್, ಫುಟ್ಬಾಲ್ | 50 | 10 | 10 | 10 | 10 | 10 |
| 5 | ದಾವಣಗೆರೆ ಕ್ರೀಡಾ ಶಾಲೆ | ಕುಸ್ತಿ, ಅಥ್ಲೆಟಿಕ್ಸ್, ಕಬಡ್ಡಿ | 50 | 10 | 10 | 10 | 10 | 10 |
| 6 | ಧಾರವಾಡ ಕ್ರೀಡಾ ಶಾಲೆ | ಜಿಮ್ನಾಸ್ಟಿಕ್ಸ್, ಹಾಕಿ, ಅಥ್ಲೇಟಿಕ್ಸ್, | 50 | 10 | 10 | 10 | 10 | 10 |
| 7 | ಗದಗ್ ಕ್ರೀಡಾ ಶಾಲೆ | ಹಾಕಿ, ಕುಸ್ತಿ, ಸೈಕ್ಲಿಂಗ್ | 60 | 10 | 10 | 10 | 10 | – |
| 8 | ಹಾವೇರಿ ಕ್ರೀಡಾ ಶಾಲೆ | ಅಥ್ಲೇಟಿಕ್ಸ್, ಹಾಕಿ, ಈಜು | 50 | 10 | 10 | 10 | 10 | 10 |
| 9 | ಕೊಪ್ಪಳ ಕ್ರೀಡಾ ಶಾಲೆ | ವಾಲಿಬಾಲ್, ಅಥ್ಲೇಟಿಕ್ಸ್ ಈಜು | 50 | 10 | 10 | 10 | 10 | 10 |
| 10 | ಶಿವಮೊಗ್ಗ ಕ್ರೀಡಾ ಶಾಲೆ | ಅಥ್ಲೇಟಿಕ್ಸ್, ಹಾಕಿ, ಫುಟ್ಬಾಲ್ | 50 | 10 | 10 | 10 | 10 | 10 |
| 11 | ತುಮಕೂರು ಕ್ರೀಡಾ ಶಾಲೆ | ವಾಲಿಬಾಲ್, ಜಿಮ್ನಾಸ್ಟಿಕ್ಸ್, ಅಥ್ಲೇಟಿಕ್ಸ್, | 50 | 10 | 10 | 10 | 10 | 10 |

ಸದರಿ ವೆಚ್ಚವನ್ನು ಹೆಚ್ಚುವರಿ ಅನುದಾನಕ್ಕಾಗಿ ಯಾವುದೇ ಕೋರಿಕೆ ಸಲ್ಲಿಸದೇ ಲೆಕ್ಕ ಶೀರ್ಷಿಕೆ: 2204-00-104-0-25-051 ಕ್ರೀಡಾ ಸಂಸ್ಥೆಗಳು ಮತ್ತು ನಿಲಯ ಸಾಮಾನ್ಯ ವೆಚ್ಚ (ಯೋಜನೆ) ಅಡಿಯಲ್ಲಿ ಭರಿಸತಕ್ಕದ್ದು.

ಮೇಲ್ದರ್ಜೆಗೇರಿಸಲಾದ ಕ್ರೀಡಾ ಶಾಲೆ/ನಿಲಯಗಳಿಗೆ ಕ್ರೀಡಾಪಟುಗಳನ್ನು ಇದರೊಂದಿಗೆ ಲಗತ್ತಿಸಿರುವ ಮಾರ್ಗಸೂಚಿಯನ್ವಯ ಆಯ್ಕೆ ಮಾಡತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಆ.ಇ. 714 ವೆಚ್ಚ-7/2016, ದಿನಾಂಕ:03.12.2016 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಆರ್. ಪ್ರಭುಶಂಕರ್)**
ಸರ್ಕಾರದ ಅಧೀನ ಕಾರ್ಯದರ್ಶಿ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

**ಇವರಿಗೆ:**

1. ಮಹಾಲೇಖಪಾಲರು, (ಎ ಮತ್ತು ಇ), ಕರ್ನಾಟಕ, ಪಿ.ಬಿ. ನಂ.5329 ಬೆಂಗಳೂರು.
2. ಮಹಾಲೇಖಪಾಲರು, (ಜಿ ಮತ್ತು ಎಸ್.ಎಸ್.ಎ), ಕರ್ನಾಟಕ, ಪಿ.ಬಿ. ನಂ.5398 ಬೆಂಗಳೂರು.
3. ಮಹಾಲೇಖಪಾಲರು, (ಇ ಮತ್ತು ಆರ್.ಎಸ್.ಎ), ಕರ್ನಾಟಕ, ಪಿ.ಬಿ. ನಂ.5398 ಬೆಂಗಳೂರು.
4. ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ನಿರ್ದೇಶನಾಲಯ, ಬೆಂಗಳೂರು
5. ಉಪ ನಿರ್ದೇಶಕರು, ಟಿ.ಎನ್.ಎಂ.ಸಿ., ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
6. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
7. ಆಂತರಿಕ ಆರ್ಥಿಕ ಸಲಹೆಗಾರರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-7/8), ವಿಧಾನ ಸೌಧ, ಬೆಂಗಳೂರು.
9. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
10. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.
11. ಶಾಖಾ ರಕ್ಷಾ ಕಡತ /ಹೆಚ್ಚುವರಿ ಪ್ರತಿ.

## ಸರ್ಕಾರ ಆದೇಶ ಸಂಖ್ಯೆ: ಯುಸೇಇ 265 ಯುಸೇಕ್ರಿ 2016, ದಿನಾಂಕ:17.01.2017ಕ್ಕೆ ಅನುಬಂಧ

### ಕ್ರೀಡಾಶಾಲೆ/ನಿಲಯಗಳನ್ನು ಮೇಲ್ದರ್ಜೆಗೇರಿಸಲು ಕ್ರೀಡಾಪಟುಗಳ ಆಯ್ಕೆಗಾಗಿ ಇರುವ ಇಲಾಖಾ ಮಾರ್ಗಸೂಚಿಯ ವಿವರ:

**ಆಯ್ಕೆ ಪ್ರಕ್ರಿಯೆ:**

ರಾಜ್ಯದ ಜಿಲ್ಲೆಗಳ ತಾಲ್ಲೂಕು ಮಟ್ಟದಲ್ಲಿ ಎಲ್ಲಾ ತಾಲ್ಲೂಕುಗಳ ಕೇಂದ್ರ ಸ್ಥಳಗಳಲ್ಲಿ ದಿನಪತ್ರಿಕೆ, ದೂರದರ್ಶನ, ಆಕಾಶವಾಣಿ ಮೂಲಕ ಪ್ರಚಾರ ನೀಡಿ ಆಯ್ಕೆ ಪ್ರಕ್ರಿಯೆಯನ್ನು ನಡೆಸಲಾಗುತ್ತದೆ. ಈ ಆಯ್ಕೆ ಪ್ರಕ್ರಿಯೆಯಲ್ಲಿ ಆಯ್ಕೆಯಾದ ಕ್ರೀಡಾಪಟುಗಳನ್ನು ಜಿಲ್ಲಾ ಮಟ್ಟದಲ್ಲಿ ನಿಗದಿಪಡಿಸಿದ ದಿನದಂದು ಪುನಃ ಆಯ್ಕೆ ಮಾಡಲಾಗುವುದು. ಈ ಜಿಲ್ಲಾ ಮಟ್ಟದ ಆಯ್ಕೆ ಪ್ರಕ್ರಿಯೆಯಲ್ಲಿ ಆಯ್ಕೆಯಾದ ಕ್ರೀಡಾಪಟುಗಳಿಗೆ ವಿಭಾಗಮಟ್ಟದಲ್ಲಿ ಇನ್ನೊಮ್ಮೆ ಆಯ್ಕೆ ಪ್ರಕ್ರಿಯೆ ನಡೆಸಲಾಗುವುದು ನಂತರ ಅಂತ್ಯದಲ್ಲಿ 4 ವಿಭಾಗಗಳಲ್ಲಿ ಆಯ್ಕೆಯಾದ ಕ್ರೀಡಾಪಟುಗಳಿಗೆ 15 ದಿನಗಳ ಕೌಶಲ್ಯ ಮೌಲ್ಯಮಾಪನ ತರಬೇತಿ ಶಿಬಿರ ನಡೆಸಿ ಅಂತಿಮವಾಗಿ ಆಯ್ಕೆಯ ನಿಯಮಾವಳಿಯಂತೆ ಪಟ್ಟಿಯನ್ನು ತಯಾರಿಸಿ ಇಲಾಖೆಯ ಮುಖ್ಯಸ್ಥರ ಅನುಮೋದನೆಯೊಂದಿಗೆ ಆಯ್ಕೆಯಾದ ಕ್ರೀಡಾಪಟುಗಳಿಗೆ ಆಯಾ ಕ್ರೀಡೆಗಳನ್ನೊಳಗೊಂಡಿರುವ ಕ್ರೀಡಾಶಾಲೆ/ನಿಲಯಗಳಿಗೆ ಪ್ರವೇಶ ನೀಡಲಾಗುವುದು.

**ವಯೋಮಿತಿ ಮತ್ತು ವಿದ್ಯಾರ್ಹತೆ:**

1. ಕ್ರೀಡಾವಸತಿ ಶಾಲೆ, ಜಿಲ್ಲಾ ಕ್ರೀಡಾಶಾಲೆ ಮತ್ತು ಕ್ರೀಡಾವಸತಿ ನಿಲಯಗಳಿಗೆ ಪ್ರವೇಶವು ನಿಗದಿತ ವಿದ್ಯಾರ್ಹತೆ ಮತ್ತು ವಯೋಮಿತಿಯಲ್ಲಿರುವ; ಆಯ್ಕೆ ಪ್ರಕ್ರಿಯೆಯಲ್ಲಿ ಹೆಚ್ಚು ಅಂಕಗಳನ್ನು ಗಳಿಸಿರುವ ಕ್ರೀಡಾಪಟುಗಳಿಗೆ ಮಾತ್ರ ಮೀಸಲಾಗಿರುವುದು.

2. ಕ್ರೀಡಾಶಾಲೆ ಮತ್ತು ಕ್ರೀಡಾನಿಲಯ (ಹಿರಿಯರ ವಿಭಾಗ)ಗಳ ಪ್ರವೇಶವು, ಆ ಶೈಕ್ಷಣಿಕ ವರ್ಷದ 1ನೇ ಜೂನ್‌ಗೆ 14 ವರ್ಷಗಳನ್ನು ಮೀರದ ಮತ್ತು 7ನೇ ತರಗತಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಿಗೆ 8ನೇ ತರಗತಿಗೆ ಮಾತ್ರ ಪ್ರವೇಶ ನೀಡಲಾಗುವುದು.

3. ಕ್ರೀಡಾನಿಲಯ (ಕಿರಿಯರ ವಿಭಾಗ)ಗಳಿಗೆ ಪ್ರವೇಶವನ್ನು ಆ ಶೈಕ್ಷಣಿಕ ವರ್ಷದ 1ನೇ ಜೂನ್‌ಗೆ 11 ವರ್ಷಗಳನ್ನು ಮೀರದ ಬಾಲಕ ಬಾಲಕಿಯರಿಗೆ ಮಾತ್ರ 5ನೇ ತರಗತಿಗೆ ಮಾತ್ರ ಪ್ರವೇಶ ನೀಡತಕ್ಕದ್ದು.

4. ಕ್ರೀಡಾ ವಸತಿ ನಿಲಯ, ಜಿಲ್ಲಾ ಕ್ರೀಡಾ ವಸತಿಶಾಲೆ ಮತ್ತು ಕ್ರೀಡಾಶಾಲೆಗೆ ಪ್ರವೇಶ ಬಯಸಿದ ಕ್ರೀಡಾಪಟುಗಳ ವಯಸ್ಸಿನ ಬಗ್ಗೆ ಸಂದೇಹಗಳಿದ್ದಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸತಕ್ಕದ್ದು. ವೈದ್ಯರು ಅವಶ್ಯ ಬಿದ್ದಲ್ಲಿ ಕ್ರೀಡಾಪಟುವಿನ ಎಕ್ಸ್-ರೇಗಳನ್ನು ತೆಗೆದು ವಯಸ್ಸಿನ ನಿರ್ಧಾರ ತೆಗೆದುಕೊಳ್ಳಬಹುದು. ವಯಸ್ಸಿನ ಬಗ್ಗೆ ವೈದ್ಯರ ನಿರ್ಧಾರವೇ ಅಂತಿಮವಾಗಿದ್ದು, ಯಾವುದೇ ಮೇಲ್ಮನವಿಗೆ ಅವಕಾಶವಿರುವುದಿಲ್ಲ.

--2

**<u>ಕ್ರೀಡಾ ಅರ್ಹತೆ:</u>**

1. ಕ್ರೀಡಾವಸತಿ ಶಾಲೆ, ಜಿಲ್ಲಾ ಕ್ರೀಡಾಶಾಲೆ ಮತ್ತು ಕ್ರೀಡಾ ವಸತಿ ನಿಲಯಗಳ ಪ್ರವೇಶವನ್ನು ವಿದ್ಯಾರ್ಹತೆ ಮತ್ತು ವಯೋಮಿತಿಯೊಂದಿಗೆ ಕ್ರೀಡಾ ಅರ್ಹತೆಯ ಮೇಲೆ ನೀಡತಕ್ಕದ್ದು.

2. ಕ್ರೀಡಾ ಅರ್ಹತೆಯನ್ನು ಕ್ರೀಡಾಪಟುವಿನ ಚಾಲನಾ ಶಕ್ತಿ, ದೈಹಿಕವಾಗಿ ಅಂತರ್ಗತವಾದ ವೇಗ, ಸ್ಫೋಟಕಶಕ್ತಿ ಮುಂತಾದ ದೈಹಿಕ ಸಾಮರ್ಥ್ಯಗಳನ್ನು ಅಳೆಯಲು ನಿಗದಿಪಡಿಸಿದ ಓಟ, ನೆಗೆತ, ಎಸೆತದ ಪರೀಕ್ಷೆಗಳನ್ನು ನಡಸಿ ನಿರ್ಧರಿಸತಕ್ಕದ್ದು, ಈ ದೈಹಿಕ ಪರೀಕ್ಷೆಗಳಲ್ಲಿ ತೋರಿದ ಸಾಧನೆಗೆ ವಯೋಮಿತಿ ಮೇಲೆ ನಿರ್ಧರಿತವಾದ ಅಂಕಗಳನ್ನು ನೀಡತಕ್ಕದ್ದು. ಅಂತಿಮವಾಗಿ ಒಟ್ಟಾರೆ ಹೆಚ್ಚು ಅಂಕಗಳನ್ನು ಗಳಿಸಿದ ಅಭ್ಯರ್ಥಿಗಳ ಸಂಖ್ಯೆಯ ಅರ್ಧದಷ್ಟು ಅಭ್ಯರ್ಥಿಗಳನ್ನು ಕಾಯ್ದಿರಿಸಿದ ಪಟ್ಟಿಯಲ್ಲಿ ಇಡತಕ್ಕದ್ದು. ಪ್ರಥಮ ಪಟ್ಟಿಯಲ್ಲಿನ ಬಾಲಕರು, ಬಾಲಕಿಯರು. ನಿಗದಿತ ದಿನಾಂಕದಲ್ಲಿ ಪ್ರವೇಶವನ್ನು ಬೇರೆ ಬೇರೆ ಕಾರಣಗಳಿಂದ ಪಡೆದುಕೊಳ್ಳದೇ ಇದ್ದಲ್ಲಿ ಕಾಯ್ದಿರಿಸಿದ ಪಟ್ಟಿಯಲ್ಲಿನ ಅಭ್ಯರ್ಥಿಗಳಿಗೆ ಪ್ರವೇಶವನ್ನು ಸಹಾಯಕ ನಿರ್ದೇಶಕರು ನೀಡಬಹುದು.

**(ಆರ್. ಪ್ರಭುಶಂಕರ್)**
ಸರ್ಕಾರದ ಅಧೀನ ಕಾರ್ಯದರ್ಶಿ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಅನುಬಂಧ-3

## Annexure-1

## Menu For 5th To 10th Std Sportspersons In DYES Hostels

| Day | SUNDAY | MONDAY | TUESDAY | WEDNESDAY | THURSDAY | FRIDAY | SATURDAY |
|---|---|---|---|---|---|---|---|
| | MORNING JUICE 200 ML + 50 GMS DRY FRUITS @ 5.15-5.45 A.M | | | | | | |
| BREAKFAST | [illegible] medium [illegible] With curd & [illegible]<br>[illegible] dosa 4 nos with chutney sambhar every 2nd & 4th Sunday<br>mushroom (50 gms) semi gravy<br>Boiled eggs 2 nos<br>Medium banana 2 nos<br>Fresh Juice 200 ml<br>Milk pack 250 ml<br>20 Gms Sprouted Grains | Ragi dosa chutney sagu<br>Dalia<br>Omelette - eggs 2 nos<br>Paneer burja<br>Medium banana 2 nos<br>Fresh Juice 200 ml<br>Milk pack 250 ml<br>20 Gms Sprouted Grains | Rava idli chutney sambhar<br>Dalia<br>Boiled eggs 2 nos<br>Paneer fry 50 gms<br>Medium banana 2 nos<br>Fresh Juice 200 ml<br>Milk pack 250 ml<br>20 Gms Sprouted Grains | Dosa sagu chutney<br>Dalia<br>Boiled eggs 2 nos<br>Paneer burja<br>Medium banana 2 nos<br>Fresh Juice 200 ml<br>Milk pack 250 ml<br>20 Gms Sprouted Grains | Bisibelebath chutney<br>Dalia<br>Boiled eggs 2 nos<br>mushroom (50 gms) semi gravy<br>Medium banana 2 nos<br>Fresh Juice 200 ml<br>Milk pack 250 ml<br>20 Gms Sprouted Grains | Thata idli sambhar chutney<br>Dalia<br>Boiled eggs 2 nos<br>Paneer burja<br>Medium banana 2 nos<br>Fresh Juice 200 ml<br>Milk pack 250 ml<br>20 Gms Sprouted Grains | Poori sagu<br>Dalia<br>Boiled eggs 2 nos<br>Paneer fry 50 gms<br>Medium banana 2 nos<br>Fresh Juice 200 ml<br>Milk pack 250 ml<br>20 Gms Sprouted Grains |
| LUNCH | Mutton biryani (mutton 175 gms)<br>Paneer biryani 100 gms (vegetarians0<br>raitha<br>Chapathi with veg kurma<br>Fruit (m) 1 no | Chapathi, Rice,<br>Dal as desired<br>Veg/ green leafy subji (150 gms) or mixed pulses subji 100 gms<br>Curd 100 ml<br>Fresh salad 50 gms<br>Fruit (m) 1 no | Chapathi, Rice,<br>Dal as desired<br>Veg/ green leafy subji (150 gms) or mixed pulses subji 100 gms<br>Curd 100 ml<br>Fresh salad 50 gms<br>Fruit (m) 1 no | Chapathi, Rice,<br>Dal as desired<br>Veg/ green leafy subji (150 gms) or mixed pulses subji 100 gms<br>Curd 100 ml<br>Fresh salad 50 gms<br>Fruit (m) 1 no | Chapathi, Rice,<br>Dal as desired<br>Veg/ green leafy subji (150 gms) or mixed pulses subji 100 gms<br>Curd 100 ml<br>Fresh salad 50 gms<br>Fruit (m) 1 no | Chapathi, Rice,<br>Dal as desired<br>Veg/ green leafy subji (150 gms) or mixed pulses subji 100 gms<br>Curd 100 ml<br>Fresh salad 50 gms<br>Fruit (m) 1 no | Chapathi, Rice, Dal, as desired<br>Veg/ green leafy subji (150 gms) or mixed pulses subji 100 gms<br>Curd 100 ml<br>Fresh salad - 50 gms<br>Fruit (m) 1 no |
| | EVENING JUICE 200 ML @ 3.15-3.45 P.M | | | | | | |
| DINNER | Chapathi, Rice, Dal, rasam as desired<br>Veg/ green leafy subji (150 gms) or mixed pulses subji 100 gms<br>Curd 100 ml<br>Fresh salad - 50 gms<br>Sweet/ice cream 90 gm<br>Boiled milk 250 ml | Chapathi, Rice, Dal, as desired<br>Veg/ green leafy subji (150 gms) or mixed pulses subji 100 gms<br>Chicken curry (175 gms)-Mushroom curry (100 gms) (for vegetarians)<br>Curd 100 ml<br>Fresh salad - 50 gms<br>Boiled milk 250 ml | Chapathi, Rice, Dal, as desired<br>Veg/ green leafy subji (150 gms) or mixed pulses subji 100 gms<br>Chicken Manchurian (175 gms)-Mushroom manchurian (100 gms) (for vegetarians)<br>Curd 100 ml<br>Fresh salad - 50 gms<br>Boiled milk 250 ml | Chapathi, Rice, Dal, as desired<br>Veg/ green leafy subji (150 gms) or mixed pulses subji 100 gms<br>Chicken chilly (175 gms)-Mushroom chilly (100 gms) (for vegetarians)<br>Curd 100 ml<br>Fresh salad - 50 gms<br>Boiled milk 250 ml | Chapathi, Rice, Dal, as desired<br>Veg/ green leafy subji (150 gms) or mixed pulses subji 100 gms<br>Mutton fry (175 gms)-Palak paneer (100 gms) (for vegetarians)<br>Curd 100 ml<br>Fresh salad - 50 gms<br>Boiled milk 250 ml | Chapathi, Rice, Dal, as desired<br>Veg/ green leafy subji (150 gms) or mixed pulses subji 100 gms<br>Butter Chicken (175 gms)-Mushroom masala (100 gms) (for vegetarians)<br>Curd 100 ml<br>Fresh salad - 50 gms<br>Boiled milk 250 ml | Chapathi, Rice, Sambhar as desired<br>Veg/ subji (150 gms)<br>Curd 100 ml<br>Fresh salad 50 gms<br>Fruit (m) 1 no<br>Sea fish fry 1 no (175 gm per head)-Mushroom fry (100 gm per head) (for vegetarians)<br>Boiled milk 250 ml |

| NUTRITIONAL PROFILE RANGES | | | |
|---|---|---|---|
| Energy (Kcal) | Carbohydrates (g) | Protein (g) | Fat (g) |
| 3849 | 498 | 170 | 131 |

*NOTE:

1. The nutritional profile of the menu is approximately calculated.
2. Wherever rice is prescribed alternatives like Ragi Balls or Jova Roti may also be provided based on the local dietary preference.
3. Quantity, if not specified shall be to satisfaction or as desire by the sportsperson.

T. Nay 28.11.19

ಸರ್ಕಾರದ ಅಧೀನ ಕಾರ್ಯದರ್ಶಿ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಕರ್ನಾಟಕ ಸರ್ಕಾರದ ಸಚಿವಾಲಯ
ದೂರವಾಣಿ ಸಂಖ್ಯೆ: 080-22[illegible]